ಮನ್ಮನೋಭೀಷ್ಟ ವರದಂ ಸರ್ವಾಭೀಷ್ಟ ಫಲಪ್ರದಂ ।

ಪುರಂದರ ಗುರುಂ ವಂದೇ ದಾಸಶ್ರೇಷ್ಠಂ ದಯಾನಿಧಿಂ ॥

ನಮ್ಮ ಮನಸ್ಸಿನಲ್ಲಿನ ಅಭೀಷ್ಟವನ್ನು ಪೂರೈಸುವ, ಎಲ್ಲ ಅಭಿಲಾಷೆಗಳನ್ನು ಫಲಿಸುವಂತೆ

ಮಾಡುವ ದಯಾನಿಧಿಗಳಾದ ದಾಸಶ್ರೇಷ್ಠರಾದ ಪುರಂದರ ಗುರುಗಳನ್ನು ವಂದಿಸುವೆ

Purandara dasaru Postal Stamp








This is a image of Purandaradasa, the Court-Poet of the Vijayanagara Empire under the reign of the king "Krishna Deva Raya" (1509-1529), carved on a block of yellow granite and placed inside the pavilion on the bank of the river Tungabhadra, which has, all along, been referred to as" Purandaradasa Pavilion" since the day it had been built in around 1522-23.



ಎಲ್ಲಿ ಹರಿಕಥಾ ಪ್ರಸಂಗವೋ ।

ಅಲ್ಲಿ ಗಂಗಾ ಯಮುನಾ ಗೋದಾವರಿ ಸರಸ್ವತೀ ಸಿಂಧು ॥

ಎಲ್ಲ ತೀರ್ಥಗಳು ಬಂದು ಎಣೆಯಾಗಿ ನಿಲ್ಲುವವು ।

ವಲ್ಲಭ ಶ್ರೀಪುರಂದರ ವಿಟ್ಠಲನು ಮೆಚ್ಚುವನು ॥

ಫಣಿಯೊಳುಪ್ಪುವ ತಿಲಕ ತುಳಸೀ ।

ಮಣಿಗಣಾಂಚಿತಕಂಠ ಕರದಲಿ ।

ಕ್ವಣಿತ ವೀಣಾ ಸುಸ್ವರದಿ ಬಹುತಾಳಗತಿಗಳಲಿ ।

ಪ್ರಣವಪ್ರತಿಪಾದ್ಯನ ಗುಣಗಳ ।

ಕುಣಿಕುಣಿದು ಅತಿಸಂಭ್ರಮದಿ ಗಾ– ।

ಯನವ ಮಾಡುವ ದೇವ ಋಷಿ ನಾರದರಿಗಾನಮಿಪೆ ॥

**– ಹರಿಕಥಾಮೃತಸಾರ ಕಕ್ಷಾತಾರತಮ್ಯಸಂಧಿ ೨೬ನೇ ಪದ್ಯ**

# ಪುರಂದರದಾಸರು

| | | |
|---|---|---|
| ಕಾಲ | : | ಕ್ರಿ ಶ **1480 - 1564** |
| ವ್ಯವಹಾರನಾಮ | : | ಶ್ರೀನಿವಾಸನಾಯಕ ವಸಿಷ್ಠಗೋತ್ರ, ಯಜುರ್ವೇದ |
| ಜನ್ಮಸ್ಥಳ | : | ಪುರಂದರಘಡ |
| ಅಂಶ | : | ನಾರದರು |
| ಅಂಕಿತ | : | ಪುರಂದರವಿಟ್ಠಲ |
| ಸ್ಥಳ | : | ಹಂಪಿ |
| ಪುಣ್ಯತಿಥಿ | : | ಪುಷ್ಯ ಬಹುಳ ಅಮಾವಾಸ್ಯೆ |
| ಅಂಕಿತ, ದಾಸದೀಕ್ಷೆ ಪ್ರಧಾನ | : | ಶ್ರೀವ್ಯಾಸರಾಜರು |
| ಹೆಂಡತಿ | : | ಹೆಂಡತಿ – ಸರಸ್ವತಿಬಾಯಿ |
| ಮಕ್ಕಳು | : | ನಾಲ್ಕು ಮಕ್ಕಳು – ವರದಪ್ಪ, ಗುರುರಾಯ, ಅಭಿನವಪ್ಪ, ಗುರುಮಧ್ವಪತಿ |

**ಮೂಗುತಿ ತಂದ ವೈರಾಗ್ಯ :** ಶ್ರೀನಿವಾಸ ನಾಯಕರು ಚಿನ್ನದ ವ್ಯಾಪಾರಿಯಾಗಿದ್ದರು. ಬಂದ ಸಂಪತ್ತನ್ನೆಲ್ಲಾ ಕೂಡಿಸಿಕೊಂಡು ಬಂದಿದ್ದರು. ಯಾರಿಗೂ ಸ್ವಲ್ಪವೂ ದಾನ ಮಾಡುತ್ತಿರಲಿಲ್ಲ. ಅವರ ಬಳಿಯಿದ್ದ ಆಸ್ತಿಯನ್ನು ಕಂಡವರು ಅವರನ್ನು "ನವಕೋಟಿ ನಾರಾಯಣ" ಎಂದೇ ಕರೆಯುತ್ತಿದ್ದರು.

ಒಮ್ಮೆ ಪರಮಾತ್ಮನು ಒಬ್ಬ ಬ್ರಾಹ್ಮಣನ ರೂಪದಲ್ಲಿ ಬಂದು, ದುಡ್ಡು ಕೇಳಿ, ಅವನು ಮೂಗುತಿಯನ್ನು ಕೇಳಿ, ಇವನು ಕೊಡದಿದ್ದಾಗ, ಅವನ ಹೆಂಡತಿಯನ್ನು ಭೇಟಿಯಾಗಿ ಯಾಚಿಸಲು, ಅವಳು ತನ್ನ ಮೂಗುತಿಯನ್ನು ಕೊಡಲು, ಅದನ್ನು ಪರಮಾತ್ಮನು ಶ್ರೀನಿವಾಸನ ನಾಯಕನ ಬಳಿಯೇ ತಂದು ಅದನ್ನು ಇಟ್ಟುಕೊಂಡು ಸಾಲಕೊಡೆಂದು, ಕೇಳಿದಾಗ, ಶ್ರೀನಿವಾಸನಾಯಕನಿಗೆ ತನ್ನ ಹೆಂಡತಿಯ ಬಳಿಯಲ್ಲಿ ಇದ್ದ ಮೂಗುತಿಯ ತರಹ ಇದೆಯಲ್ಲ ಎಂದು ತನ್ನ ಹೆಂಡತಿಯ ಬಳಿ ಬಂದು ಪರೀಕ್ಷಿಸಿದಾಗ, ಅಲ್ಲೂ ಮತ್ತು ತನ್ನ ಖಜಾನೆಯಲ್ಲೂ ಎರಡೂ ಕಡೆ ಒಂದೇ ಮೂಗುತಿ ಕಂಡು ಪರಮಾತ್ಮನ ಲೀಲೆಯೆಂದು ಅರಿತು ವೈರಾಗ್ಯ ಪಡೆದು ಪುರಂದರಘಡವನ್ನು ಬಿಟ್ಟು ತನ್ನ ಹೆಂಡತಿ ಮಕ್ಕಳೊಂದಿಗೆ ತನ್ನ ಸಂಪೂರ್ಣ ಆಸ್ತಿಯನ್ನೂ ಬಿಟ್ಟು ಬಂದ ಮಹಾತ್ಮರು. ನಂತರ ವ್ಯಾಸರಾಜರನ್ನು ಭೇಟಿಯಾಗಿ ಅವರ ಶಿಷ್ಯತ್ವ ಪಡೆಯಲು ಅವರು ಶ್ರೀನಿವಾಸನಾಯಕನಿಗೆ "ಪುರಂದರವಿಠಲ" ಅಂಕಿತ ನೀಡಿ ದಾಸದೀಕ್ಷೆ ನೀಡಿದರು. ದಾಸರು ಮಧುಕರವೃತ್ತಿಯನ್ನು ಅವಲಂಬಿಸಿ, ತುಳಸೀಮಾಲೆ, ತಂಬೂರಿ, ಗೆಜ್ಜೆ, ಗೋಪಾಲಬುಟ್ಟಿಯನ್ನು ಹಿಡಿದು ತಮ್ಮ ದಾಸವೃತ್ತಿಯನ್ನು ಆರಂಭಿಸಿದರು.

ಇವರು ಸುಮಾರು ೪೭೫೦೦೦ ಕೃತಿಗಳನ್ನು ರಚಿಸಿದ್ದಾರೆ. ಇವರ ಕೃತಿಗಳನ್ನು ಅದರ ಗೂಡಾರ್ಥಗಳನ್ನು, ತತ್ವಗಳನ್ನು ಪರಾಮರ್ಶಿಸಿದ ವ್ಯಾಸರಾಜರು ಇವರ ಕೃತಿಗಳನ್ನು ಶ್ರೀಮದಾಚಾರ್ಯರ ಸರ್ವಮೂಲದ ಜೊತೆಗೆ ಇರಿಸಿ, ಅದನ್ನು **"ಪುರಂದರೋಪನಿಷತ್"** ಎಂದು ಕರೆದರು. ಇವರು ಸುಮಾರು ೪೭೫೦೦೦ ಕೀರ್ತನೆಗಳು, ಸುಳಾದಿಗಳು, ಉಗಭೋಗಗಳು, ಮುಂಡಿಗೆಗಳು, ತತ್ವಗಳನ್ನು ರಚಿಸಿದ್ದಾರೆ. ಆದರೆ ಸದ್ಯಕ್ಕೆ ಸುಮಾರು ೧೦೦೦ ಮಾತ್ರ ಲಭ್ಯವಿದೆ.

ಕೃಷ್ಣದೇವರಾಯನು ಇವರನ್ನು ತನ್ನ ಅರಮನೆಗೆ ಕರೆಯಿಸಿ ದಾಸರ ಜಪಕ್ಕಾಗಿ ಹಂಪಿಯಲ್ಲಿ "ಪುರಂದರಮಂಟಪ"ವನ್ನು ಕಟ್ಟಿಸಿಕೊಟ್ಟಿದ್ದಾನೆ.

**ಇವರ ಸಮಕಾಲೀನರು** – ಶ್ರೀವ್ಯಾಸರಾಜರು, ಶ್ರೀ ವಾದಿರಾಜರು, ಶ್ರೀಶ್ರೀಪಾದರಾಜರು, ಶ್ರೀಕೃಷ್ಣದೇವರಾಯ, ಇತ್ಯಾದಿಗಳು.

# ಪುರಂದರದಾಸರ ಜೀವನ ಚರಿತ್ರ್ಯ ರಚನೆ – ವಿಜಯದಾಸರು

ರಾಗ – ಪಂತುವ ರಾಳಿ ತಾಳ – ಏಕ ತಾಳ

ಬೇಸರದೆ ಭಜಿಸಿರೋ ಪುರಂದರದಾಸರಾಯರ ॥ಪ॥

ಶ್ರೀಶ ನಿಮ್ಮನು ದಾಸೀನ ಮಾಡದೆ ಪೋಷಿಸುವ ಸಂತೋಷದಿಂದಲಿ ॥ಅ.ಪ॥

ಪುರಂದರ ಗಡದೊಳಗೆ ಹಿರಿಯ ಸಾಹುಕಾರನೆನಿಸಿ
ಪರಿಪರಿಯ ಸೌಖ್ಯಗಳಸುರಿಸುತ್ತ ಇರುತಿರಲು ।
ನರಹರಿ ಕರುಣದಿಂದಲಿ ಬ್ರಾಹ್ಮಣನಾಗುತ್ತಾ ಯಾಚಕನ ತೆರದಲಿ ।
ಹರುಷದಿಂದಲಿ ಮನೆಗೆ ಹೋಗುತ್ತಾ ಯಜಮಾನ ಕಂಡು
ಜರಿದು ಬ್ರಾಹ್ಮಣನ್ನೊರಗೆ ನೂಕಲು
ಮರುದಿವಸ ಮತ್ಹೋಗಿನಿಂತ ॥೧॥

ಆರುತಿಂಗಳು ಬೆನ್ನ ಬೀಳುತ್ತಾ ನಾಯಕನ ಕಾಣುತ
ಆರು ಬಿಡುತಾರೆಂದು ಬೈಯುತ್ತಾ ।
ಬೇಸತ್ತು ಎರಡು ಹೇರು ರೊಕ್ಕವ ಮುಂದೆ ಸುರಿಯುತ್ತಾ
ಇದರೊಳಗೆ , ದುಡ್ಡೊಂದಾರಿಸಿಕೊಳ್ಳೆಂದು ಪೇಳಲು
ನಾರಾಯಣ ಬಿಟ್ಹೋದ ನಗುತಾ ॥೨॥

ಹಿತ್ತಲ ಬಾಗಿಲಲಿ ಹೋಗಿ ಮತ್ತೆ ಆತನ ಮಡದಿಯ ।
ಬೆನ್ ಹತ್ತಿ ಬಿದ್ದನು ವಿತ್ತ ತಾರೆನುತಾ, ಮಗನ ಮುಂಜ್ಯೆಂದತ್ಸಧಿಕದಂ ।
ಬಾಯತೆರೆಯುತ್ತಾ ಆ ಪ್ರಾಣಿ ನುಡಿದಳು ।
ಎತ್ತಣ ದ್ರವ್ಯವು ತನಗೆನುತಾ, ನಿನ್ನ ಮೂಗಿನ ಮುತ್ತಿನ ಮೂಗುತಿಯ
ಕೊಡು ಎನೆ ಉತ್ತಮಳು ತೆಗೆದಿತ್ತಳುತ್ವರಿತಾ ॥೩॥

ಜೋಕೆಯಿಂದಲಿ , ಮೂಗುತಿವೋಯಿದು ।
ಆಕೆಯ ಗಂಡನ ಕಣ್ಣೆದುರಿಗೆ ಹಾಕಿದನು ತಾ, ಪಾಕಿಕೊಡು ಎನುತಾ।
ಆದ ಕಂಡು, ಇದು ನಮ್ಮಾಕೆಯದು ಎಂದು ನುಡಿಯುತ್ತಾ ।
ಅನ್ಯರದು ಇಂಥಾದ್ಯಾಕೆ ಇರಬಾರದು ಎನುತಾ ।
ಬೆಲೆ ಹೇಳು ಎನಲು, ಬಾರಿ ಬಾರಿ ಸಾಹುಕಾರನ ಮೋರೆಹತ್ತಿ
ಮೇರೆಯಿಲ್ಲದೆ ನಾಲ್ಕು ಶುಭ್ರಕೊಡು,
ಎಂಥ್ಹಾಕಿ ಪೋದನು ತಿರುಗಿಬಾರದೆ ॥೪॥

ತಿರುಗಿ ಬ್ರಾಹ್ಮಣ ಬಾರದಿರಲು, ಕರೆದು ತನ್ನ ಹೆಂದತಿಯ,
ಬರಿಯನಾಸಿಕವನ್ನೆಕಂಡನು ಮೂಗುತಿಯು ಎಲ್ಲೆನೆ,
ಮುರಿದಿಹುದು, ಎಂದಾಕಿ ಪೇಳಿದಳು, ವಳಗ್‌ಹೋಗೆ ತರದಿರೆ,
ಅರೆವೆ ನಿನ್ನ ಜೀವವೆಂದನು, ವಿಷಗೊಂಬೆನೆಂದು,
ಕರದಿ ಬಟ್ಟಲ ಧರಿಸಲಾಕ್ಷಣ, ತ್ವರಿತ, ನರಹರಿ ಅದರೊಳ್ಹಾಕಿದ ॥೫॥

ಹರುಷದಿಂದಾಭರಣ ತಂದೂ, ಪುರುಷನ ಕೈಯೊಳಗಿಡಲು,
ತರಿಸಿ ತನ್ನಲ್ಲಿದ್ದ ಪೆಟ್ಟಿಗೆಯ, ಅದು ಕಾಣಾದಿರಲು,
ಬೆರಗಾಗಿ ನೋಡಿದ ತನ್ನ ಮಡದಿಯಾ ॥
ನಿಜಪೇಳು ಎನಲು, ಆರಿಸಿ ಪೇಳ್ದಳು ಕೊಟ್ಟಸುದ್ದಿಯಾ ।
ಅಭಿಮಾನ ಕಂಜಿ, ಅರೆದು ವಿಷವನು, ಕುಡಿಯಪೋಗೆ ।
ಸಿರಿರಮಣ ತಾ ಕೊಟ್ಟ ಬರೆಯಾ ॥೬॥

ದೇವ ದೇವ ಎನ್ನ ಮನದ ಭಾವವನ್ನು ತಿಳಿವುದಕ್ಕೆ ತಾ ।
ವೃದ್ಧ ಬ್ರಾಹ್ಮಣಾಗಿ ಬಂದಿದಾ ।
ಪರಿಪಕ್ವ ಎನಗಿನ್ ಆವ ಕಾಲಕ್ಕಾಗಬೇಕೆಂದಾ ।
ವೈರಾಗ್ಯ ಭಾವದಿ ಜೀವಿಸಿಕೊಂಡಿರುವುದೇ ಚಂದಾ ।
ಹೀಗೆಂದು ಮನೆ ಧನ ಕೋವಿದರ ಕರದಿತ್ತು ಹರುಷದಿ ।
ಕಾವನ್ನೈಯ್ಯನ ದಾಸನಾದ ॥೭॥

ಲಕ್ಷ್ಮೀಪತಿಯ ಪಾದದಲ್ಲಿ । ಲಕ್ಷ್ಯೆವಿಟ್ಟು ವ್ಯಾಸರಾಯರ ।
ಶಿಕ್ಷೆಯಿಂದಂಕಿತವಗೊಳ್ಳುತ್ತಾ ।
ಪದಕೊರತೆ ಐದು ಲಕ್ಷಪದ ಸುಳಾದಿ ಪೇಲುತ್ತಾ ।
ಪ್ರತಿ ದಿವಸದಲ್ಲಿ, ಪಕ್ಷಿವಾಹನ ನಾಟ್ಯ ಮಾಡುತ್ತಾ ।
ಅಪರೋಕ್ಷಪುಟ್ಟಲು । ಮೋಕ್ಷ ಸ್ಥಾನಕೆ ಕರದ್ಯೊಯ್ದು ।
ಅದೋಕ್ಷಜನು । ಸಂರಕ್ಷಿಸಿದಾ ॥೮॥
ಘೋರ ನರಕದಲ್ಲಿ ಬಿದ್ದಪಾರಜನು ।
ಚೀರುತ್ತಿರಲುದ್ದಾರ ಮಾಡಿದ , ನಾರದರಿವರು ।
ಆವತಾರ ಮಾಡಿದ ಧಾರುಣಿಯೊಳ್ ಮತ್ತೆ ಬಂದಾರು ।
ಸರ್ವೋತ್ತಮಾನು ನಾರಾಯಣನೆಂದು ಸಾರಿದನು ।
ಹೀಗೆಂದು ತಿಳಿಯಲು ಮಾರಜನಕ ವಿಜಯ ವಿಠಲ ।
ಆರಿಗಾದರು ವಲಿವ ಕಾಣಿರೋ
ಬೇಸರದೆ ಭಜಿಸಿರೋ ಪುರಂದರದಾಸರಾಯರ ॥೯॥

ರಾಗ – ಕಾಂಬೋದಿ : ತಾಳ – ಝಂಪೆ ತಾಳ

**“ದಾಸರೆಂದರೆ ಪುರಂದರ ದಾಸರಯ್ಯ**”

ದಾಸರೆಂದರೆ ಪುರಂದರ ದಾಸರಯ್ಯ ।ಪ।

ವಾಸುದೇವ ಕೃಷ್ಣನ್ನ ಸೂಸಿ ಪೂಜಿಸುವಂಥ ।ಅ ಪ।

ಗ್ರಾಸಕಿಲ್ಲದೆ ಪೋಗಿ ಪರರ ಮನೆಗಳ ಪೊಕ್ಕು
ದಾಸನೆಂದು ತುಳಸಿ ಮಾಲೆ ಧರಿಸೀ
ಬೇಸರಿಲ್ಲದೆ ಅವರ ಕಾಡಿ ಬೇಡಿ ಬಳಲಿಸುತ
ಕಾಸುಗಳಿಸುವ ಪುರುಷ ಹರಿದಾಸನೇ ।೧।

ಡಂಭಕದಿ ಹರಿಸ್ಮರಣೆ ಮಾಡಿ ಜನರ ಮುಂದೆ
ಸಂಭ್ರಮದಿ ತಾನುಂಬ ಊಟ ಬಯಸೀ
ಅಂಬುಜೋದ್ಭವ ಪಿತನ ಆಗಮಗಳರಿಯದೆ
ತಂಬೂರಿ ಮೀಟಲವ ಹರಿದಾಸನೇ ।೨।

ಪಾತಕನ ತೆರನಂತೆ ಪದಗಳನು ತಾ ಬೊಗಳಿ
ಕೂಟ ಜನರ ಮನವ ಸಂತೋಷಗೊಳಿಸೀ
ಗೂಟ ನಾಮಗಳಿಟ್ಟು ಕೊಟ್ಟರಿಯೆ ತಾನೆನುತ
ಬೂಟಕವ ಮಾಡಲವ ಹರಿದಾಸನೇ ।೩।

ಯಾಯಿವಾರವ ಮಾಡಿ ವಿಪ್ರರಿಗೆ ಮೃಷ್ಟಾನ್ನ
ಪ್ರೀಯದಲಿ ತಾನೊಂದು ಕೊಡದ ಲೋಭಿ
ಮಾಯ ಸಂಸಾರದಲಿ ಮಮತೆ ಹೆಚ್ಚಾಗಿಟ್ಟು
ಗಾಯನವ ಮಾಡಲವ ಹರಿದಾಸನೇ ।೪।
ನೀತಿಯೆಲ್ಲವನರಿತು ನಿಗಮ ವೇದ್ಯನ ನಿತ್ಯ
ವಾತಸುತನಲ್ಲಿಹನ ವರ್ಣಿಸುತಲೀ
ಗೀತ ನರ್ತನದಿಂದ ಕೃಷ್ಣನ್ನ ಪೂಜಿಸುವ

ಪೂತಾತ್ಮ ಪುರಂದರ ದಾಸರಿವರಯ್ಯ ।೫।

ರಾ ಗ – ಪೂ ರ್ವಿ ಕ ಲ್ಯಾ ಣಿ : ತಾ ಳ – ಆ ದಿ ತಾ ಳ

ದಾಸಗುರೊ ಹರಿ ದಾಸಗುರೊ
ವಾಸವನಾಮಕ ದಾಸಗುರೊ ।ಪ।
ಭೂಸುರರಿಗೆ ಧನರಾಶಿ ಸಮರ್ಪಿಸಿ
ವ್ಯಾಸರಾಯರುಪದೇಶಗೊಂಡ ।ಅ ಪ।
ಜಲಜಭವನ ಪಿತನಾಜ್ಞೆಯಲಿ। ಈ
ಕಲಿಯುಗದಲಿ ಜನ್ಮತಾಳುತಲಿ ॥
ಅಲವಬೋಧರಮತ ನೆಲೆಯನು ಸುಲಭದಿ
ತಿಳಿಗನ್ನಡದಲಿ ತಿಳುಹಿಸಿ ಸಲಹಿದ ।೧।
ಪವನ ದೇವನ ಒಲಿಸುತಲಿ। ಮಾ
ಧವನ ಸ್ತುತಿಸಿ ಸಲೆ ಕುಣಿಯುತಲಿ ॥
ಕವನದಿ ಭಕುತಿಯ ನವವಿಧಮಾರ್ಗವ
ಅವನಿಗೆ ಬೀರಿದ ದಿವಿಜಮೌನಿವರ ।೨।
ಕಾಮಿತಫಲಗಳಗರೆಯುತಲಿ। ಬಲು
ಪಾಮರಜನರನು ಸಲಹುತಲಿ ॥
ಶ್ರೀಮನೋವಲ್ಲಭ ಶ್ಯಾಮಸುಂದರನ
ನಾಮಾಮೃತವನು ಪ್ರೇಮದಿಂದುಣಿಸಿದ ।೩।

ರಾ ಗ – ಹ ಂ ಸ ಧ್ವ ನಿ : ತಾ ಳ – ರೂ ಪ ಕ ತಾ ಳ

ಗುರು ಪುರಂದರದಾಸರೆ ನಿಮ್ಮ ಚರಣಕಮಲವ ನಂಬಿದೆ ।ಪ।

ಗರುವರಹಿತನ ಮಾಡಿ ಎನ್ನನು ಪೊರೆವ ಭಾರವು ನಿಮ್ಮದೆ ।ಅ ಪ।

ಒಂದು ಅರಿಯದ ಮಂದಮತಿ ನಾನಿಂದು ನಿಮ್ಮನು ವಂದಿಪೆ

ಇಂದಿರೇಶನ ತಂದು ತೋರಿಸಿ ತಂದೆ ಮಾಡೆಲೊ ಸತ್ಕೃಪೆ ।೧।

ಪುರಂದರಘಡದೊಳಗೆ ನಿಂದು ನಿರುತ ದ್ರವ್ಯವ ಗಳಿಸಿದೆ

ಪರಮಪುರುಷನು ವಿಪ್ರನಂದದಿ ಕರವ ನೀಡಿ ಯಾಚಿಸೆ ।೨।

ಪರಮ ನಿರ್ಗುಣ ಮನವನರಿತು ಹರಿಗೆ ಸೂರೆಯ ನೀಡುತ

ಅರಿತು ಮನದೊಳು ಹರಿದು ಭವಗಳ ತರುಣಿ ಸಹಿತಾ ಹೊರಟನೆ ।೩।

ಮಾರಜನಕನ ಸನ್ನಿಧಾನದಿ ಸಾರಗಾನವ ಮಾಡುವ

ನಾರದರೆ ಈ ರೂಪದಿಂದಲಿ ಚಾರುದರುಶನ ತೋರಿದ ।೪।

ಅಜಭವಾದಿಗಳರಸನಾದ ವಿಜಯವಿಟ್ಠಲನ ಧ್ಯಾನಿಪ

ನಿಜ ಸುಜ್ಞಾನವ ಕೊಡಿಸಬೇಕೆಂದು ಭಜಿಪೆನೊ ಕೇಳ್ ಗುರುವರ ।೫।